


# ಸಾಹಿತ್ಯ ಉತ್ಸವಗಳ ಸುತ್ತ...

ಸಾಹಿತ್ಯ ಮತ್ತು ರಾಜಕಾರಣ, ಸಾಹಿತ್ಯ ಮತ್ತು ಸಿದ್ಧಾಂತಗಳು ಇತ್ಯಾದಿ ಜೋಡಿ ಪರಿಕಲ್ಪನೆಗಳು ಬರಹರೂಪದಲ್ಲಿ ಹಳತಾಗಿ ಕಂಡರೂ ಸಾಹಿತ್ಯವೆಂಬ ಬಯಲಿನಲ್ಲಿ ಹಲ ಬಗೆಯಲ್ಲಿ ಉಸಿರಾಡುತ್ತಲೇ ಇವೆ. ಆ ಬಯಲಿನಲ್ಲಿ ನಿಂತು ಆಲೋಚಿಸಿದರೆ ಪ್ರಾಮಾಣಿಕತೆ, ಅಪ್ರಾಮಾಣಿಕತೆಗಳ ದ್ವಂದ್ವಗಳು ಇದ್ದೇ ಇವೆ. ಮನುಷ್ಯನ ಮನಸ್ಸಿನ ಬಯಲುರೂಪದಲ್ಲಿ ಕಾಣುವ 'ಸಾಹಿತ್ಯ'ವೆಂಬ ಚಿಕ್ಕ ವಿನ್ಯಾಸಕ್ಕೆ ಅಂಟಿರುವ ಬಹುದೊಡ್ಡ ರೋಗಗಳೆಂದರೆ ಬಂಡವಾಳತನ ಮತ್ತು ಮಾನವೀಯತೆಯನ್ನು ದಾಟುವ ಸಿದ್ಧಾಂತಗಳು. ಹಾಗಾದರೆ ಸಾಹಿತ್ಯ ವಲಯದಲ್ಲಿ ಓದುಗರ ಸಂಖ್ಯೆಯಾಗಲಿ, ಬರಹಗಾರರಾಗಲೀ ಕಡಿಮೆಯೇನೂ ಆಗಲಿಲ್ಲ. ಪ್ರತಿ ವರ್ಷ ನಡೆಯುವ ಸಮ್ಮೇಳನ, ಸಂಭ್ರಮ ಮುಂತಾದವುಗಳು ಕೇವಲ ಸಾಹಿತ್ಯ ಕೇಂದ್ರಿತವಾಗುತ್ತಿರುವುದು ಒಂದು ದುರಂತವೆ. ಜನಸಾಮಾನ್ಯರು ಎಂದೆನಿಸಿಕೊಳ್ಳುವ ಅನೇಕ ಜನ ಕನ್ನಡ ಸಾಹಿತ್ಯ ಪರಿಷತ್ತು ನಡೆಸುವ ಸಮ್ಮೇಳನಕ್ಕೆ ಒಲವು ತೋರಿಸುವುದರಲ್ಲಿ ಒಂದರ್ಥವಿದೆ. ಇದಕ್ಕೊಂದು ವಿದ್ವಾಂಸತನದ ಮತ್ತು ಚಾರಿತ್ರಿಕ ಚರಿತ್ರೆ ಇರುವುದರಿಂದ ಕನ್ನಡ ಜನತೆ ಭಾವನಾತ್ಮಕ ನಂಟನ್ನು ಹೊಂದಿರುವುದರಲ್ಲಿ ತಪ್ಪಿಲ್ಲ. ಆದರೆ ಕ್ರಮೇಣ ತನ್ನ ಒಪ್ಪಿತ ನಿಲುವುಗಳ ತೀವ್ರತೆಯನ್ನು ಕಳೆದುಕೊಳ್ಳುತ್ತಿರುವ ಹಾದಿಯನ್ನು ನೋಡುತ್ತಿರುವ ಓದುಗರು ಅಲ್ಲಿ ನಡೆಯುವ ವೇದಿಕೆಗಳ ಚರ್ಚೆಗಳ ಕಡೆ ಮುಖ ಮಾಡುವುದಕ್ಕಿಂತ ಪುಸ್ತಕ ಮಾರಾಟ ಕೇಂದ್ರಗಳ ಕಡೆ ಜಾರುತ್ತಾರೆ.

ಕನ್ನಡದಂತಹ ಪ್ರಾದೇಶಿಕ ಭಾಷೆಯನ್ನು ಉಳಿಸುವ ಜವಾಬ್ದಾರಿ ಹೊತ್ತಿರುವ ಹಳ್ಳಿ, ಜನಸಮುದಾಯಗಳನ್ನು ಸಾಹಿತ್ಯ ವೇದಿಕೆಗಳ ತನಕ ಬಂದು ಹೋಗುವ ಹಾಗೆ ಯಾವುದಾದರೂ ಸಮ್ಮೇಳನ ಮತ್ತು ಉಳಿದ ಉತ್ಸವಗಳು ಮಾಡಿವೆಯೇ? ಎಂಬ ಪ್ರಶ್ನೆಯಂತೂ ಇದ್ದೇ ಇದೆ. ಈ ಬಗೆಯ ಉತ್ಸವಗಳು ಯಾರನ್ನು ಕೇಂದ್ರವಾಗಿಟ್ಟುಕೊಂಡಿವೆ ಎಂಬುದು ಅತಿದೊಡ್ಡ ಸವಾಲು. ರಾಜಕಾರಣದ ಕೊಂಡಿಯನ್ನು ಪಡೆದುಕೊಂಡು ನಡೆಯುವ ಅನೇಕ ಸಮ್ಮೇಳನಗಳು ಕನ್ನಡದ ಭಾಷೆಗೆ ಸಂಬಂಧಪಟ್ಟ ಹಲವು ಸಮಸ್ಯೆಗಳನ್ನು ಇಂದಿಗೂ ಸರಿಯಾಗಿ ಪೂರ್ತಿಮಾಡಿಲ್ಲ. ಇವುಗಳಲ್ಲಿ ಮಂಡಿತವಾಗುವ ಅಕಡೆಮಿಕ್ ಪ್ರಬಂಧಗಳೂ ಪೂರ್ವಗ್ರಹ ಪೀಡಿತ ಮತ್ತು ಪೂರ್ವಸಿದ್ಧತೆಯ ಕೊರತೆಯಿಂದ ಸೊರಗುತ್ತಿವೆ. ಅಖಿಲ ಭಾರತ ಸಾಹಿತ್ಯ ಸಮ್ಮೇಳನಗಳಲ್ಲಿ ನಡೆಯಲಾರದ ಚರ್ಚೆಗಳು ಕೆಲವು ಬಾರಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ನಡೆಯುತ್ತವೆ. ಇದಕ್ಕೆ ಸಣ್ಣ ನಿದರ್ಶನ ಆಂಧ್ರದ ಗಡಿಭಾಗವಾದ ಪಾವಗಡದಲ್ಲಿ